# ಅವಳು

ಅವಳು ಮುಗ್ಧಳಲ್ಲ
ಪ್ರಬುದ್ಧಳೂ ಅಲ್ಲ
ಅವಳು ಶುದ್ಧಳಲ್ಲ
ಅಶುದ್ಧಳೂ ಅಲ್ಲ

ಅವಳು ಗೆದ್ದವಳಲ್ಲ
ಬಿದ್ದವಳೂ ಅಲ್ಲ
ಅವಳು ಸದ್ದಾದವಳಲ್ಲ
ಸುಮ್ಮನಿದ್ದವಳೂ ಅಲ್ಲ

ಅವಳು ಅಭೇದ್ಯಳಲ್ಲ
ವೇದ್ಯಳೂ ಅಲ್ಲ
ಅವಳು ಕ್ರುದ್ಧಳಲ್ಲ
ಅಪದ್ಧಳೂ ಅಲ್ಲ

ಅವಳು ಆದವಳಲ್ಲ
ಆಗದೆ
ಉಳಿದವಳೂ ಅಲ್ಲ

ಬಗೆಯಲಾಗದೆ
ಒಗೆಯಲೂ ಆಗದೆ
ಅವಳ
ನೆನಪಲ್ಲಿ ಗಾಯವಾದಾಗೆಲ್ಲ
ನೀವು
ಬಟ್ಟೆ ನೇಯಬಹುದು

ಯಾರೂ ನೋಡದೆ
ಹೋದಾಗ ಉಟ್ಟೂ
ನೋಡಬಹುದು.

● **ನಂದಿನಿ ಹೆದ್ದುರ್ಗ**



ಕಲೆ: ವಾಗೀಶ ಹೆಗಡೆ

